■ ಪೆರಿಫೆರಲ್ ರಸ್ತೆಗೆ ಬಜೆಟ್‌ನಲ್ಲಿ ಘೋಷಿಸಿದಂತೆ 10 ಪಥಗಳಲ್ಲ, 17 ಲೇನ್‌ಗಳು ■

# ನಗರದ ಸುತ್ತ 116 ಕಿ.ಮೀ. 17 ಲೇನ್ ರಸ್ತೆ!

■ ವಿಶೇಷ ವರದಿ

**ಕನ್ನಡಪ್ರಭ ವಾರ್ತೆ, ಬೆಂಗಳೂರು, ಫೆ.22**

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಮ್ಮ ಬಜೆಟ್‌ನಲ್ಲಿ ಪ್ರಕಟಿಸಿದಂತೆ ಬಿಡಿಎ ನಗರದ ಸುತ್ತ ನಿರ್ಮಿಸುವ ಹೊರವರ್ತುಲ ರಸ್ತೆ 10 ಪಥದ್ದಲ್ಲ. ಬದಲಿಗೆ 17 ಪಥದ ರಸ್ತೆ!

116 ಕಿಲೋ ಮೀಟರ್ ಉದ್ದದ ಪೆರಿಫೆರಲ್ ರಸ್ತೆ ಇದಾಗಿದ್ದು ಮೂರ್‍ನಾಲ್ಕು ವರ್ಷಗಳ ಹಿಂದೆಯೇ ಪ್ರಕಟಿಸಿದ್ದ ಯೋಜನೆಯೂ ಆಗಿದೆ. ಇದರ ಕಾಮಗಾರಿಗೆ 2009–10 ನೇ ಸಾಲಿನಲ್ಲಿ ಚಾಲನೆ ನೀಡಲು ರಾಜ್ಯ ಸರ್ಕಾರ ಸಂಕಲ್ಪ ಮಾಡಿದೆ.

ಬಿಡಿಎ ಉನ್ನತಾಧಿಕಾರಿಗಳ ಪ್ರಕಾರ ಎಲ್ಲಾ ವಾಹನಗಳ ಸಂಚಾರಕ್ಕೆಂದು ಎರಡು ಮಾರ್ಗಗಳಲ್ಲಿ ತಲಾ ನಾಲ್ಕು ಪಥಗಳಿರುತ್ತವೆ. ಅಂದರೆ, 8 ಮಾರ್ಗಗಳು. ಈ ಮಾರ್ಗಗಳಲ್ಲಿ ಸಂಚರಿಸುವ ವಾಹನಗಳಿಗೆ ಟೋಲ್ ಫೀ ಇರಲಿದೆ.

ಇದಲ್ಲದೇ ಬಿಎಂಟಿಸಿ ಬಸ್‌ಗಳಿಗೆಂದೇ ತಲಾ 2 ಪಥಗಳಿರುವ ಮೂಲಕ ಒಟ್ಟು ನಾಲ್ಕು ಪಥಗಳು ಮೀಸಲಿರುತ್ತವೆ. ಆದರೆ, ಬಿಎಂಟಿಸಿ ಬಸ್‌ಗಳ ಸಂಚಾರಕ್ಕೆ ಟೋಲ್ ಫೀ ಇರುವುದಿಲ್ಲ.



■ 8 ಪಥಗಳು ಸಾರ್ವಜನಿಕ ವಾಹನಗಳಿಗೆ

■ ಇನ್ನು ನಾಲ್ಕು ಪಥಗಳು ಬಿಎಂಟಿಸಿ ಬಸ್‌ಗಳಿಗೆ

■ ಉಳಿದ 5 ಪಥ ಟೋಲ್ ಫ್ರೀ, ಸ್ಥಳೀಯ ವಾಹನಕ್ಕೆ ಮೀಸಲು

■ ಎಲ್ಲೂ ಸಿಗ್ನಲ್ ಇರುವುದಿಲ್ಲ

ಇವೆಲ್ಲಾ ತಡೆರಹಿತ ರಸ್ತೆಗಳಾಗಿದ್ದು, ಸಾರ್ವಜನಿಕರು ತಮ್ಮ ವಾಹನಗಳನ್ನು ಬಳಸದೇ ಕ್ಷಿಪ್ರವಾಗಿ ನಿಗದಿತ ಸ್ಥಳಗಳನ್ನು ತಲುಪಲು ಅನುಕೂಲ ಆಗುವ ನಿಟ್ಟಿನಲ್ಲಿ ಯೋಜನೆ ರೂಪಿಸಲಾಗಿದೆ. ಅದೇ ರೀತಿ ಬಿಎಂಟಿಸಿ ಬಸ್‌ಗಳಲ್ಲೇ ಸಂಚರಿಸಲು ಉತ್ತೇಜನ ನೀಡುವ ದೃಷ್ಟಿಯಿಂದ ಬಸ್‌ಗಳಿಗೆ ಪ್ರತ್ಯೇಕ ಪಥಗಳನ್ನು ನಿರ್ಮಿಸಲಾಗುತ್ತಿದೆ. ಈ ಪಥಗಳಲ್ಲಿ ಬಸ್ ಹೊರತುಪಡಿಸಿ ಯಾವುದೇ ವಾಹನಗಳಿಗೆ ಪ್ರವೇಶ ಇರುವುದಿಲ್ಲ.

ಸಾರ್ವಜನಿಕರು ತಮ್ಮ ವಾಹನಗಳ ಮೂಲಕ ಈ ರಸ್ತೆಗಳಲ್ಲಿ ಸಂಚರಿಸಿದರೆ ಟೋಲ್ ಫೀ ಪಾವತಿಸಬೇಕಾಗುತ್ತದೆ. ಜತೆಗೆ ಇಂಧನಕ್ಕೆ ವೆಚ್ಚ ಮಾಡಬೇಕಾಗುತ್ತದೆ. ಇದನ್ನು ತಪ್ಪಿಸಲೆಂದೇ ಬಸ್‌ಗಳ ಸಂಚಾರ ಹೆಚ್ಚು ಮಾಡಲಾಗುತ್ತದೆ ಎನ್ನುತ್ತಾರೆ ಅಧಿಕಾರಿಗಳು.

ಇನ್ನು ಪ್ರಮುಖ ರಸ್ತೆಯ ಇಕ್ಕೆಲಗಳಲ್ಲಿ ತಲಾ ಎರಡೂವರೆ ಸೇವಾ ರಸ್ತೆಗಳಿರಲಿವೆ. ರಸ್ತೆಯ ಸುತ್ತಮುತ್ತಲಿನ ಗ್ರಾಮಗಳ ವಾಹನಗಳ ಸಂಚಾರ ಮತ್ತು ಟೋಲ್‌ಫೀ ಕೊಟ್ಟು ತಡೆರಹಿತವಾಗಿ ಸಂಚರಿಸಲು ಇಷ್ಟವಿಲ್ಲದವರಿಗೆ ಈ ಸೇವಾ ರಸ್ತೆಗಳು ಇರಲಿವೆ.

■ **6 ತಿಂಗಳಲ್ಲಿ ಟೆಂಡರ್:** ತುಮಕೂರು ರಸ್ತೆ ಮತ್ತು ಹೊಸೂರು ರಸ್ತೆ ಸಂಪರ್ಕಿಸುವ ಮೊದಲ ಹಂತದ 65 ಕಿಲೋ ಮೀಟರ್ ಉದ್ದದ ರಸ್ತೆ ಕಾಮಗಾರಿಗೆ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳ್ಳುವ ಹಂತಕ್ಕೆ ತಲುಪಿದ್ದು, ಮುಂದಿನ 6 ತಿಂಗಳಲ್ಲಿ ಕಾಮಗಾರಿಗೆ ಟೆಂಡರ್ ಪ್ರಕ್ರಿಯೆ ಆರಂಭವಾಗಲಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಭೂಸ್ವಾಧೀನಕ್ಕೆ 700 ಕೋಟಿ ರು. ಮತ್ತು ಕಾಮಗಾರಿಗೆ 2800 ಕೋಟಿ ರುಪಾಯಿ ವೆಚ್ಚವಾಗಲಿದೆ.

■ **ರಸ್ತೆ ಎಲ್ಲೆಲ್ಲಿ?:** ಈ ರಸ್ತೆಯು ಹೊಸೂರು ರಸ್ತೆ, ಹಳೇ ಮದ್ರಾಸ್ ರಸ್ತೆ, ಮೈಸೂರು ರಸ್ತೆ, ಕನಕಪುರ ರಸ್ತೆ, ತುಮಕೂರು ರಸ್ತೆ, ಬಳ್ಳಾರಿ ರಸ್ತೆ, ಮಾಗಡಿ ರಸ್ತೆ, ಸರ್ಜಾಪುರ ರಸ್ತೆ ಮತ್ತು ಬನ್ನೇರುಘಟ್ಟ ರಸ್ತೆಗಳನ್ನು ಸಂಪರ್ಕಿಸಲಿದೆ.